ಸಹಾಯವಾಗುತ್ತದೆ. ಬೇಸಿಗೆ ಬೆಳೆ ತಯಾರು ಮಾಡಲಿಕ್ಕೆ ಏನು ಸಿದ್ಧತೆ ಮಾಡಬೇಕೊ ಅದಕ್ಕೆ ನಾವು ಸಂಪೂರ್ಣವಾಗಿ ಸಹಾಯ ಮಾಡುತ್ತೇವೆ.

2. ತಾಲ್ಲೂಕು ಹಾಗೂ ಡಿಸ್ಟ್ರಿಕ್ಟ್ ಟ್ರಜರಿಗಳಿಗೆ ಸರ್ಕಾರದಿಂದ ಬ್ಯಾನ್ ಆರ್ಡರ್ ನೀಡಿರುವ ಬಗ್ಗೆ.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಉಪಾಧ್ಯಕ್ಷರೆಯವರೆ, ನಾನು ಒಂದು ಬಹಳ ಮಹತ್ವಪೂರ್ಣ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಕಳೆದ ಒಂದು ತಿಂಗಳಿಂದ ತಾಲ್ಲೂಕ್ ಮತ್ತು ಡಿಸ್ಟ್ರಿಕ್ಟ್ ಟ್ರೆಜರಿಗಳಿಗೆ ಸರ್ಕಾರದ ಅಧಿಕಾರಿಗಳಿಂದ ಓರಲ್ ಇನ್‌ಸ್ಟ್ರಕ್ಷನ್ಸ್ ಬಂದಿದೆ. ಟ್ರೆಜರಿ ಬ್ಯಾನ್ ಇದೆ. ಇದರಿಂದ ಏನಾಗಿದೆ ಅಂದರೆ, ಟ್ರೆಜರಿಗಳಲ್ಲಿ ಲಂಚ ಜಾಸ್ತಿಯಾಗಿದೆ. ನಾನು ಸ್ಪೆಸಿಫಿಕ್ ಆಗಿ ಒಂದು ಉದಾಹರಣೆಯನ್ನು ಕೊಡುತ್ತೇನೆ. ಈಗ ಮಂಡಲ್ ಪಂಚಾಯಿತಿಗಳವರು ಎಲ್ಲಿರತಕ್ಕ ವಾಟರ್ ಸಪ್ಲೈ ಸ್ಕೀಮ್ ಅನ್ನು ಮೇನ್‌ಟೇನ್ ಮಾಡುತ್ತಿದ್ದಾರೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಸಹಿತ ಬೋರ್‌ವೆಲ್‌ಅನ್ನು ಹಾಕಲಿಕ್ಕೆ ಮಂಡಲ್ ಪಂಚಾಯತಿ ಸೆಕ್ರೆಟರಿಗಳು ಮತ್ತು ನೀವು ನೇಮಕ ಮಾಡಿರತಕ್ಕಂಥ ಅಡ್ಮಿನಿಸ್ಟ್ರೇಟರ್‌ಗಳೇ ಆ ಕೆಲಸವನ್ನು ಮಾಡುತ್ತಿದ್ದಾರೆ. ಈಗ ಇದರಿಂದ ಏನಾಗುತ್ತಿದೆ ಅಂದರೆ, 2-3 ಸಾವಿರ ರೂಪಾಯಿಗಳನ್ನು ಮಂಡಲ್ ಪಂಚಾಯತಿಯ ಸೆಕ್ರೆಟರಿಗಳು ಅಡ್ಮಿನಿಸ್ಟ್ರೇಟರ್ ಅಪ್ರೂವಲ್ ತಗೆದುಕೊಂಡು ಬಿ.ಡಿ.ಓ. ಮೂಲಕವಾಗಿ ತಾಲ್ಲೂಕ್ ಟ್ರೆಜರಿಗಳಿಗೆ ಕೊಡುತ್ತಿದ್ದಾರೆ. ಕುಡಿಯುವ ನೀರಿಗೆ ಬೇಕಾಗಿರತಕ್ಕಂಥ ಕರೆಂಟ್ ಬಿಲ್ ಮತ್ತು ಹಳ್ಳಿಗಳಿಗೆ ಬೇಕಾಗಿರತಕ್ಕಂಥ ಬಲ್ಬ್ ಬಿಲ್‌ಗಳನ್ನು ಕಳುಹಿಸಿದರೂ ಸಹ ಅಪ್ರೂವಲ್ ಆಗುತ್ತಿಲ್ಲ. ಸರ್ಕಾರ ಇದನ್ನು ಏತಕ್ಕೆ ಮಾಡಿದೆ ಎಂದು ನನಗಂತೂ ಅರ್ಥವಾಗುತ್ತಿಲ್ಲ. ನಿಮಗೆ ಒಂದು ಸ್ಪೆಸಿಫಿಕ್ ಇನ್‌ಸ್ಟೆನ್ಸ್ ಕೊಡುತ್ತೇನೆ. ನಿನ್ನೆಯ ದಿವಸ ಕನಕಪುರ ತಾಲ್ಲೂಕಿನ ಹಾರೋಹಳ್ಳಿಯಲ್ಲಿರುವ ಜೂನಿಯರ್ ಕಾಲೇಜಿನ ಪ್ರಿನ್ಸಿಪಾಲರು ನನ್ನ ಹತ್ತಿರ ಬಂದು ನೋಡಿ ಸ್ವಾಮಿ, ಸರ್ಕಾರದಿಂದ ಎರಡು ಬಿಲ್ಡಿಂಗ್ ಅನ್ನು ವೊಕೇಶನಲ್ ಜಾಬ್ ಓರಿಯೆಂಟೆಡ್ ಟೆಕ್ನಿಕಲ್ ಕೋರ್ಸ್‌ಗೆ ನೀನೇ ಎಜ್ಯುಕೇಷನ್ ಮಿನಿಸ್ಟರ್ ಆಗಿದ್ದಾಗ ಮಂಜೂರು ಮಾಡಿದ್ದೀರಿ. ಇದನ್ನು ನಡೆಸಲು ನನಗೆ ಒಂದೂವರೆ ಲಕ್ಷ ರೂಪಾಯಿ ಮಂಜೂರಾತಿಯಾಗಿದೆ ನಾನು ಟ್ರೆಜರಿಗೆ ಬಿಲ್ಲನ್ನು ಕಳುಹಿಸಿದರೆ ಕನಕಪುರ ಟ್ರೆಜರಿಯ ಆಫೀಸರ್ ರವರು ನನಗೆ ಐದು ಸಾವಿರ ರೂಪಾಯಿಯನ್ನು ಕೊಡುವವರಿಗೆ ಆ ಬಿಲ್ ಅನ್ನು ಪಾಸ್ ಮಾಡುವುದಿಲ್ಲವೆಂದು ಅವರಿಗೆ ಖಚಿತವಾಗಿ ಹೇಳಿರುತ್ತಾರೆ.

ಇದನ್ನು ನಾನು ನಂಬಲಿಲ್ಲ. I did not want to believe such small things. ಅಮೇಲೆ ಇದ್ದು ನಾನು ವೆರಿಫೈ ಮಾಡಿದೆ. ನಾನು ಅನೇಕ ತಾಲ್ಲೂಕಿನ ಜಿಲ್ಲಾಧಿಕಾರಿಗಳನ್ನು ಬಿ.ಡಿ.ಎ.ಗಳನ್ನು ಮಂಡಲ ಪಂಚಾಯಿತಿ ಕಾರ್ಯದರ್ಶಿಗಳನ್ನು ಕರೆಸಿ ಕೇಳಿದಂಥ ಸಂದರ್ಭದಲ್ಲಿ ನಿಜವಾಗಿತ್ತು. ಯಾವುದೇ ಬಿಲ್ಲನ್ನು ಪಾಸ್ ಮಾಡಬೇಡಿ ಎಂದು ಸರ್ಕಾರ ಸೂಚನೆ ಬಂದಿದೆಯೆಂದು. ಕರೆಂಟ್ ಬಿಲ್ ಗಳು ಪಾಸ್ ಆಗುತ್ತಿಲ್ಲ. ಹೀಗಾದರೆ ಮಂಡಲ ಪಂಚಾಯಿತಿಗಳು ಹೇಗೆ ಫಂಕ್ಷನ್ಸ್ ಮಾಡಬೇಕು. ರೋಜಗಾರ್ ಯೋಜನೆಯಲ್ಲಿ ಬಿಲ್ಲನ್ನು ನಾವೇನು ಕಟ್ಟುತ್ತಿದ್ದೀವೆ, ಇದು ಸಹ ಆಗುತ್ತಿಲ್ಲ, ಇದಕ್ಕೆ ಕಾರಣವೇನು? ಕೇಂದ್ರ ಸರ್ಕಾರದಿಂದ ನಿಮಗೆ ಕಂತಿನ ದುಡ್ಡು ಬಂದಿಲ್ಲವೇ? ಅಥವಾ ರಾಜ್ಯ ಸರ್ಕಾರದಿಂದ ನಿಮ್ಮ ಟ್ರೆಜರಿಗಳಿಗೆ

ನೀವು ಸೂಚನೆ ಕೊಟ್ಟಿದ್ದೀರಾ? ನಿಮ್ಮ ಸರ್ಕಾರದ ಹಣಕಾಸಿನ ಪರಿಸ್ಥಿತಿ ಏನು? ಭದ್ರತೆ ಇಲ್ಲವೇ? ನೀವು ಟ್ರೆಜರಿಯನ್ನು ಏತಕ್ಕೆ ಬ್ಯಾನ್ ಮಾಡಿದ್ದೀರಿ? ಎಂಬುದರ ಬಗ್ಗೆ ತಾವು ತಿಳಿಸಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೆಯವರೆ, ಉಪ ನಾಯಕರಾದ ಶ್ರೀ ಸಿದ್ಧರಮಯ್ಯ ಹೇಳಿದಂತೆ ಟ್ರೆಜರಿ ಬ್ಯಾನ್ ಎಂಬ್ಲ ಕಡೆ ಇದೆ. ಹಾಗಾಗಿ, ಇಡೀ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳೆಲ್ಲವೂ ಒಟ್ಟಾಗಿ ಸ್ಥಗಿತವಾಗಿವೆ. ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ನೇರವಾಗಿ ಪ್ರಶ್ನೆ ಕೇಳುತ್ತಿದ್ದೇನೆ. ನೀವು ನಿಮ್ಮ ಸರ್ಕಾರದ ಫೈನಾನ್ಷಿಯಲ್ ಪೊಜಿಷನ್ ಬಹಳ ಜೆನ್ಯೂನಿಯೆಂದು ಕೇಂದ್ರ ಸರ್ಕಾರದ ಯೋಜನಾ ಆಯೋಗದ ಮುಂದೆ ಹೋಗಿ ನಾವು ರಿಸೋರ್ಸಸ್ ಮೊಬಿಲೈಸ್ ಮಾಡಿದ್ದೇವೆಂದು ಹೇಳಿ ಮುಂದಿನ ವರ್ಷಕ್ಕೆ 3,025 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿಸಿಕೊಂಡು ಬಂದಿರಿ. ಆ ರೀತಿ ರಿಸೋರ್ಸ್ ಮೊಬಿಲೈಸ್ ಮಾಡದೇ ಇದ್ದರೆ ಟ್ರೆಜರಿ ಬ್ಯಾನ್ ಏತಕ್ಕೆ? ತಾವು ತಮ್ಮ ಸರ್ಕಾರದ ಫೈನಾನ್ಸ್ ಬಗ್ಗೆ ಈ ಸದನದಲ್ಲಿ ಒಂದು ಶ್ವೇತ ಪತ್ರವನ್ನು ಇಡುವುದಕ್ಕೆ ಸಾಧ್ಯವೇ?

ಶ್ರೀ ಎಂ. ವೀರಪ್ಪ ಮೊಯ್ಲಿ : ಸನ್ಮಾನ್ಯ ಉಪಾಧ್ಯಕ್ಷರೆಯವರೇ, ಈಗ ಫೈನಾನ್ಸ್ ಬಗ್ಗೆ ಏನು ಮಾಹಿತಿ ಕೊಡಬೇಕು ಅಥವಾ ನಾವು ನಮ್ಮ ಸರ್ಕಾರದ ಬಜೆಟ್ ಅನ್ನು ಬರುವ ಫೆಬ್ರವರಿ ತಿಂಗಳ 22ನೇ ದಿನಾಂಕದಂದು ಮಂಡಿಸುತ್ತೇವೆ. It will be a s good as..

(Interruptions)

Sri. R.V. Deshpande : What is the present financial position?

(Interruptions)

ಶ್ರೀ ವಾಟಾಳ್ ನಾಗರಾಜ್: ನಿಮ್ಮ ಸರ್ಕಾರದ ಹಣಕಾಸಿನ ಪರಿಸ್ಥಿತಿ ಬಗ್ಗೆ ಹಾಗೂ ನಿಮ್ಮ ಸರ್ಕಾರದ ಮುಂದಿನ ಯೋಜನೆ ಬಗ್ಗೆ ಒಂದು ಶ್ವೇತ ಪತ್ರವನ್ನು ಹೊರಡಿಸಿ. ತಾವು ಫೆಬ್ರವರಿ ತಿಂಗಳಿನಲ್ಲಿ ಬಜೆಟ್ ಮಂಡಿಸುವುದು ನಮಗೂ ಗೊತ್ತಿದೆ. ಅದಕ್ಕೂ ಮುಂಚಿತವಾಗಿ ತಾವು ಒಂದು ಶ್ವೇತ ಪತ್ರವನ್ನು ಹೊರಡಿಸಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ : ಮಾನ್ಯ ಉಪಾಧ್ಯಕ್ಷರೆಯವರೆ, We are presenting the Budget on 22nd February 1993. ಆದುದರಿಂದ, ಅದೇ ಶ್ವೇತ ಪತ್ರ ಆಗುತ್ತದೆ. ಅದನ್ನು ಆಗ ಕೊಡುತ್ತೇವೆ. ಈಗ ಪ್ರಶ್ನೆ ಏನೆಂದರೆ, ಅದು ತಮಗೂ ಕೂಡ ಗೊತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗ ಫೆಬ್ರವರಿ 22ನೇ ತಾರೀಖಿನಂದು 1993-94ನೇ ಸಾಲಿನ ಬಜೆಟ್ ಅನ್ನು ಮಂಡಿಸಿ ಮತ್ತು ರಿಸೋರ್ಸ್ ಮೊಬಿಲೈಜೇಷನ್ ಹೇಗೆ, ಮಾಡಬೇಕೆಂಬುದರ ಬಗ್ಗೆ ಮತ್ತು ಕೇಂದ್ರ ಸರ್ಕಾರದಿಂದ ಎಷ್ಟು ದುಡ್ಡು ಬರುತ್ತದೆ ಎಂಬುದು ಅವೆಲ್ಲವೂ ಒಂದು ಭಾಗ ಆದರೆ, ನಾನು ಕೇಳುತ್ತಿರತಕ್ಕಂಥಾದ್ದು ಇಷ್ಟೇ. ಈಗ 4,000-5,000 ರೂಪಾಯಿಗಳ ಸಣ್ಣ-ಪುಟ್ಟ ಬಿಲ್ಲುಗಳನ್ನು ಟ್ರೆಜರಿಯಲ್ಲಿ ಲಿಫ್ಟ್ ಮಾಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಈಗ ಸನ್ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು, ಆರ್.ಎ. ದೇಶಪಾಂಡೆಯವರು ಹಾಗೂ ವಾಟಾಳ್ ನಾಗರಾಜ್‌ರವರು ಸಂಪನ್ಮೂಲದ ಪ್ರಶ್ನೆ ವಿಚಾರ ಏನು ಎತ್ತಿದ್ದಾರೆ. ತಾವು ಕೂಡ ಸರ್ಕಾರದಲ್ಲಿದ್ದವರು. ಕೆಲವು ಸಲ ವೇಸ್ ಅಂಡ್ ಮೀನ್ಸ್ ಪೊಜಿಷನ್ ಇರುತ್ತದೆ. ಅದನ್ನು ನಾವು ಚಾಕಚಕ್ಯತೆಯಿಂದ ನಿಭಾಯಿಸಬೇಕಾಗುತ್ತದೆ. ಏಕೆಂದರೆ, ನಾನು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಾಗ ಟ್ರೆಜರಿಯಲ್ಲಿ 100 ಕೋಟಿ ರೂಪಾಯಿಗಳ ಬಿಲ್ ಪೆಂಡಿಂಗ್ ಇತ್ತು. ಕ್ಯಾಶ್‌ನಲ್ಲಿ 5 ಕೋಟಿ ರೂಪಾಯಿಗಳು ಇತ್ತು. With that I Started my position. ಇದು ಯಾರ ತಪ್ಪು, ಒಪ್ಪು ಎಂಬ ಪ್ರಶ್ನೆಯಲ್ಲ. 100ಕೋಟಿ ರೂಪಾಯಿಯಲ್ಲಿ ಈಗಾಗಲೇ 50 ಕೋಟಿ ರೂಪಾಯಿಗಳನ್ನು ಸೆಟ್ಲ್ ಮಾಡಿದ್ದೇವೆ. ಇನ್ನೊಂದು 50 ಕೋಟಿ ರೂಪಾಯಿಗಳಿವೆ. ಅದನ್ನು ನಿಭಾಯಿಸುತ್ತೇವೆ. ಆದರಿಂದ ಉಳಿದ ಕಾರ್ಯಕ್ರಮಗಳಿಗೆ ತಡೆಯಾಗಬಾರದು. ಆದುದರಿಂದ, ನಾವೇನು ಟ್ರೆಜರಿ ಬ್ಯಾನ್‌ಗೆ ಯಾವುದೇ ಆದೇಶ ಕೊಟ್ಟಿಲ್ಲ. ಆದರೆ, ತಾವೇನು ಹೇಳಿದ್ದೀರಿ. ತಾವು ಹೇಳಿದ್ದರಲ್ಲಿ ಸ್ವಲ್ಪ ಕಾಂಟ್ರಡಿಕ್ಷನ್ ಇದೆ. ಏನೆಂದರೆ, ಕನಕಪುರದ ಟ್ರೆಜರಿ ಆಫೀಸಿನಲ್ಲಿರುವ ಒಬ್ಬ ಅಧಿಕಾರಿ ತನಗೆ 5 ಸಾವಿರ ರೂಪಾಯಿಗಳನ್ನು ಕೊಟ್ಟರೆ ನಿಮ್ಮ ಬಿಲ್ಲನ್ನು ಕ್ಲಿಯರ್ ಮಾಡುತ್ತೇನೆಂದು ಹೇಳಿದುದಾಗಿ ಹೇಳಿದ್ದೀರಿ. ಇದರ ಬಗ್ಗೆ ಕೂಡಲೇ ಮಾಹಿತಿ ತೆಗೆದುಕೊಂಡು ಸಂಜೆಯೊಳಗಾಗಿ ಸೂಕ್ತಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಸರ್ಕಾರದ ಹಣಕಾಸಿನ ಪರಿಸ್ಥಿತಿ ಬಗ್ಗೆ ಒಂದು ಶ್ವೇತ ಪತ್ರವನ್ನು ಹೊರಡಿಸುತ್ತೀರಾ?

ಶ್ರೀ ಎಂ. ವೀರಪ್ಪ ಮೊಯ್ಲಿ : ನಾನು ಈಗಾಗಲೇ ಈ ಮನೆ ಹಾಗೂ ಈ ಮನೆಯಲ್ಲಿ ಹೇಳಿಕೆ ಕೊಟ್ಟಿದ್ದೇನೆ. ಆಸ್ತಿ ಮತ್ತು ಹೊಣೆಗಳಿಗೆ ನಮ್ಮ ಸರ್ಕಾರವೇ ಉತ್ತರಾಧಿಕಾರ. ಅದಕ್ಕೆ ತೊಂದರೆ ಏನಿಲ್ಲ, ನಾವು, ನಿಭಾಯಿಸುತ್ತೇವೆ. ಈ ವರ್ಷದ ಪ್ಲಾನ್ ಪರ್‌ಫಾರ್ಮೆನ್ಸ್ ಏನಿದೆ, ಅದನ್ನು ಕೂಡ we are going to....

(Interruptions)

Sri. R.V. Deshpande : Hon. Chief Minister admitted that the financial position of the State was not good when he took over as Chief Minister.

ಶ್ರೀ ಎಂ. ವೀರಪ್ಪ ಮೊಯಿಲಿ : ಸುಮಾರು ನೂರು ಕೋಟಿ ರೂಪಾಯಿಗಳ ಬಿಲ್‌ಗಳು ಬಾಕಿ ಇತ್ತು, ಅದರಲ್ಲಿ ಈಗಾಗಲೆ 50 ಕೋಟಿ ರೂಪಾಯಿಗಳನ್ನು ನಿಭಾಯಿಸಿದ್ದೇವೆ, ಇನ್ನು ಮುಂದೆ ತಾವ್ಯಾರು ಗಾಭರಿಪಟ್ಟು ಕೊಳ್ಳತಕ್ಕಂಥ ಅವಶ್ಯಕತೆ ಇಲ್ಲ, ಏನು ಟ್ರೆಜರಿ ಬ್ಯಾನ್ ಇದೆ ಅದನ್ನು ನಾವು ತೆಗೆದುಹಾಕುತ್ತೇವೆ.

ಉಪಾಧ್ಯಕ್ಷರೆಯವರು : ಎಲ್ಲರೂ ಮಾತನಾಡಿದರೆ ಹೇಗಾಗುತ್ತದೆ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ಕೆಲಸ ಮಾಡಲು ಹಣವೇ ಇಲ್ಲ, ಒಂದು ತಿಂಗಳಿನಿಂದಲೂ ಬಿಲ್ಲುಗಳು ಪಾಸ್ ಆಗಿಲ್ಲ, ಎಲ್ಲಾ ಬಿಲ್ಲುಗಳು ಪೆಂಡಿಂಗ್ ಇವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಪಿ.ಡಬ್ಲ್ಯೂ.ಡಿ. ಇಲಾಖೆ ಮತ್ತು ನೀರಾವರಿ ಇಲಾಖೆಗೆ ಎಲ್.ಓ.ಸಿ. ಯನ್ನು ಇಶ್ಯೂ ಮಾಡಿದ್ದೇವೆ. ಮಂಡಲಪಂಚಾಯತಿ ಮತ್ತು ಜಿಲ್ಲಾಪರಿಷತ್‌ಗಳ ಬಿಲ್ಲುಗಳೀಸಿವೆ ಅದನ್ನೂ ಕೂಡ ಸೆಟ್ಲ್ ಮಾಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಉಪಾಧ್ಯಕ್ಷಣಿಯರೆ, ಎಲ್ಲಾ ಕೆಲಸಗಳೂ ಸ್ಥಗಿತವಾಗಿವೆ, ಎಲ್.ಓ.ಸಿ. ಇಲ್ಲದೆ ಪಿ.ಡಬ್ಲ್ಯೂ.ಡಿ. ಇಲಾಖೆಯ ಕೆಲಸಗಳು, ಕಾಮಗಾರಿಗಳು ಬಿದ್ದಿವೆ, ಎಲ್ಲಾ ಕೆಲಸಗಳು ಸಂಪೂರ್ಣವಾಗಿ ನಿಂತುಹೋಗಿವೆ. ಪಿ.ಡಬ್ಲ್ಯೂ.ಡಿ. ಇಲಾಖೆಗೆ ದಯಮಾಡಿ ಹಣವನ್ನು ಬಿಡುಗಡೆ ಮಾಡಬೇಕು.

(ಗೊಂದಲ)

ಉಪಾಧ್ಯಕ್ಷಣಿಯವರು : ಶೂನ್ಯ ವೇಳೆಯಲ್ಲಿ ಎಲ್ಲಾ ವಿಷಯಗಳನ್ನು ಮಾತನಾಡಲು ಆಗುವುದಿಲ್ಲ. ನೀವು ಕೊಟ್ಟಿರುವ ವಿಷಯದ ಬಗ್ಗೆ ಮಾತ್ರ ಮಾತನಾಡಬಹುದು. ಎಲ್ಲರೂ ಮಧ್ಯೆ ಪ್ರವೇಶಮಾಡಿದರೆ ಹೇಗಾಗುತ್ತದೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ತಾವು ತಪ್ಪಾಗಿ ತಿಳಿದುಕೊಳ್ಳುತ್ತಿದ್ದೀರಿ, ಎಲ್ಲಾದರಲ್ಲಿಯೂ ಮಧ್ಯೆ ಪ್ರವೇಶ ಮಾಡತಕ್ಕ ಉದ್ದೇಶ ನಮ್ಮದಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಒಂದು ರಸ್ತೆಗೆ ಮಣ್ಣನ್ನು ಹಾಕಿಸಲು ಹಣವಿಲ್ಲ, ಒಂದು ರಸ್ತೆಯ ಕೆಲಸ ಮಾಡಲು ನಿಮ್ಮ ಕೈಯಲ್ಲಿ ಹಣವಿಲ್ಲ, ಎಲ್.ಓ.ಸಿ. ಇಲ್ಲ, ಕೆಲಸ ನಡೆಯುತ್ತಿಲ್ಲ.

ಉಪಾಧ್ಯಕ್ಷಣಿಯವರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಸರ್ವೇಸಾಮಾನ್ಯ ನಾವು ಇದರ ಬಗ್ಗೆ ಎಲ್ಲೆಲ್ಲಿ, ಹಣವನ್ನು ಬಿಡುಗಡೆ ಮಾಡಬೇಕೋ ಅದಕ್ಕೆ ಟ್ರಾಯುರಿ ಬ್ಯಾನ್ ಇಲ್ಲ, ನಾವು ಬಿಡುಗಡೆ ಮಾಡುತ್ತೇವೆ. ಆದರೆ ವಾಟಾಳ್ ನಾಗರಾಜ್‌ರವರು, ಮತ್ತೆ ಯಡಿಯೂರಪ್ಪನವರು ಏನು ಹೇಳಿದ್ದಾರೆ ಆ ಕಾಮಗಾರಿಗಳ ಹಣ ಬಿಡುಗಡೆಗೆ ಏನಾದರೂ ತೊಂದರೆಯಾಗಿದ್ದರೆ ಅದನ್ನು ನಿವಾರಿಸಿ ಹಣವನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷಣಿಯವರೆ....

(ಗೊಂದಲ)

ಶ್ರೀ ಬಿ.ಎಂ. ಇದಿನಬ್ಬ : ಶೂನ್ಯ ವೇಳೆಯಲ್ಲಿ ಈ ವಿಷಯವನ್ನು ಹೇಳುವಂತಿಲ್ಲ, ಈಗ ಸಮಯ ನೋಡಿ ಎಷ್ಟಾಗಿದೆ?

(ಗೊಂದಲ)

3. ನೇಕಾರರಿಗೆ ಹೆಚ್.ಡಿ.ಎ.ಯಿಂದ ನೂಲು ಸಿಗದೆ ತೊಂದರೆ

+ ಶ್ರೀ ಆರ್.ವಿ. ದೇಶಪಾಂಡೆ : ಸನ್ಮಾನ್ಯ ಉಪಾಧ್ಯಕ್ಷಣಿಯರೆ, ನಾನು ಮತ್ತೆ ಮಾನ್ಯ ಸಿಂಧ್ಯರವರು ತಮ್ಮ ಗಮನಕ್ಕೆ ತರಬಯಸುದೇನೆಂದರೆ, ರಾಜ್ಯದಲ್ಲಿ